<u>ಸಾಕ್ಷಿಯನ್ನು ದಿಃ 03.09.2021 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಜಿ ಜಿ ಜಿ ವಕೀಲರಿಂದಃ</u>**

ಪ್ರತಿವಾದಿಗಳು, ನನಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದಾರೆ ಎಂದು ನಾನು ಹೇಳಿದ್ದು ಆ ಕರಾರು ಪತ್ರಕ್ಕೆ ಕುಮಾರಸ್ವಾಮಿ ಹಾಗೂ ರಾಜಗೋಪಾಲ್ ಎನ್ನುವವರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ. ರಾಜಗೋಪಾಲ್ ನನಗೆ ಸ್ನೇಹಿತರಲ್ಲ ಹಾಗೂ ಸಂಬಂಧಿಕರಲ್ಲ. ಹಾಗಾದರೆ ಅವರನ್ನು ಸಾಕ್ಷಿದಾರರಾಗಿ ಯಾರು ಕರೆದುಕೊಂಡು ಬಂದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅವರು ಬೇರೆ ಯಾವುದೋ ಕೆಲಸಕ್ಕೆ ತಾಲೂಕು ಕಛೇರಿಗೆ ಬಂದಿದ್ದರು ಆಗ ಅವರ ಸಹಿ ಪಡೆದಿದ್ದರೆ ಎಂದು ಉತ್ತರಿಸುತ್ತಾರೆ . ಕರಾರು ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿ ಎಂದು ನಾನೇ ಅವರನ್ನು ಕೇಳಿಕೊಂಡು ಸಹಿ ಮಾಡಿಸಿದ್ದೇನೆ. ಕುಮಾರ ಸ್ವಾಮಿಯವರು ನನಗೆ ಸ್ನೇಹಿತರಲ್ಲ ಹಾಗೂ ಸಂಬಂಧಿಕರಲ್ಲ. ಅವರನ್ನು ಕರಾರ ಪತ್ರಕ್ಕೆ ಸಾಕ್ಷಿದಾರರಾಗಲು ಯಾರುಕರೆದುಕೊಂಡು ಬಂದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಯಾರೂ ಕರೆದುಕೊಂಡು ಬಂದಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿದಾರರಾಗಿ ಸಹಿ ಮಾಡಿ ಎಂದು ನಾನು ಕುಮಾರಸ್ವಾಮಿಯವರನ್ನು ಕೇಳಿಕೊಂಡಿದ್ದೆ.

ರಾಜಗೋಪಾಲ್ ರವರು ನಮ್ಮ ಊರಿನವರು. ಆದ್ದರಿಂದ ನನಗೆ ಅವರ ಪರಿಚಯವಿದೆ. ಸಾಕ್ಷಿದಾರರಾಗಿ ಸಹಿ ಮಾಡಿದ ಕುಮಾರಸ್ವಾಮಿಯವರು ಹಿರಿಯೂರು ಟೌನ್ ನವರು. ನನಗೆ ಕುಮಾರ ಸ್ವಾಮಿಯವರ ಪರಿಚಯ ಮೊದಲಿನಿಂದ ಇತ್ತು. ರಾಜಗೋಪಾಲ್ ರವರು ತಮಿಳುಗೌಡರು. ಕುಮಾರಸ್ವಾಮಿಯವರು ಕರ್ನಾಟಕದ ಗೌಡರು. ಈ ಪ್ರಕರಣದ ಉಲ್ಲೇಖಿತ ಕರಾರು ಪತ್ರವನ್ನು ಹೊರತು ಪಡಿಸಿ ನಾನು ಬೇರೆ ಎಷ್ಟು ಕರಾರು ಪತ್ರ

ಮಾಡಿಸಿಕೊಂಡಿದ್ದೇನೆ ಎನ್ನುವುದು ನನಗೆ ಮರೆತುಹೋಗಿದೆ. ಸಾಕ್ಷಿ ಮುಂದುವರೆದು 2-3 ಮಾಡಿಸಿರಬಹುದು ಎಂದು ಉತ್ತರಿಸುತ್ತಾರೆ. ಆ 2-3 ಕರಾರು ಪತ್ರಗಳನ್ನು ನಾನು ಯಾರಿಂದ ಬರೆಸಿಕೊಂಡಿದ್ದೇನೆ ಎನ್ನುವುದು ನನಗೆ ಸರಿಯಾಗಿ ನೆನಪಿಲ್ಲ. ಈ ದಾವೆಯ ಪ್ರತಿವಾದಿಗಳ ಕಡೆಯಿಂದ ದಾವಾಸ್ತಿಗೆ ಸಂಬಂಧಿಸಿದಂತೆ 2 ಕ್ರಯದ ಕರಾರು ಪತ್ರಗಳನ್ನು ಬರೆಸಿಕೊಂಡಿದ್ದೆ ನೀವು ಎಷ್ಟು ಕ್ರಯದ ಕರಾರು ಪತ್ರಗಳನ್ನು ರದ್ದತಿ ಮಾಡಿಕೊಟ್ಟಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 2 ಪತ್ರಗಳನ್ನು ರದ್ದತಿ ಮಾಡಿಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ.

ನಾನು ಈ ಮೊದಲು ಮಾಡಿಸಿದ್ದ 2-3 ಕರಾರು ಪತ್ರಗಳಲ್ಲಿ ಎಷ್ಟು ದಾಖಲೆಗಳಿಗೆ ಆರ್. ಕುಮಾರಸ್ವಾಮಿಯವರಿಂದ ಸಾಕ್ಷಿದಾರರಾಗಿ ಸಹಿ ಮಾಡಿಸಿದ್ದೇನೆ ಎನ್ನುವುದು ಗೊತ್ತಿಲ್ಲ . ನಿಪಿ-1 ರ ದಾಖಲೆಗೆ ಆರ್. ಕುಮಾರಸ್ವಾಮಿಯವರು ಎಷ್ಟು ಸಹಿ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿರುವ ಆರ್ ಕುಮಾರ ಸ್ವಾಮಿಯವರ ಸಹಿಯನ್ನು ನಾನು ನೋಡಿ ಗುರುತಿಸುತ್ತೇನೆ. ಸಾಕ್ಷಿಗೆ ನಿಪಿ-1 ರ ದಾಖಲೆಯನ್ನು ತೋರಿಸಿ ಅದರಲ್ಲಿ ಆರ್. ಕುಮಾರಸ್ವಾಮಿಯವರ ಸಹಿ ಎಲ್ಲಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅವರ ಸಹಿಯನ್ನು ತನಗೆ ಗುರುತಿಸಲು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ .

ನಾನು ಯಾವುದೇ ಕರಾರು ಪತ್ರ ಮಾಡಿಕೊಂಡರೂ ನನ್ನ ಸಂಬಂಧಿಕ/ಪರಿಚಯಸ್ಥರಾದ ಆರ್. ಕುಮಾರ ಸ್ವಾಮಿಯವರ ಸಹಿಯನ್ನು ಸಾಕ್ಷಿದಾರನಾಗಿ ಪಡೆಯುತ್ತೇನೆ ಎಂದರೆ ಸರಿಯಲ್ಲ. ಆರ್ ಕುಮಾರ ಸ್ವಾಮಿಯವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಡಿ.3 ದಾಖಲೆಯನ್ನು ತೋರಿಸಿ ಆ ದಾಖಲೆಗೂ ಸಹ ಆರ್. ಕುಮಾರ ಸ್ವಾವಿಯವರು 2 ನೇ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿ ಮಾಡಿರಬಹುದು ಎಂದು ಉತ್ತರಿಸುತ್ತಾರೆ . ನಿಪಿ.1 ರ ಕರಾರು ಪತ್ರವನ್ನು ಜಿ ಕುಮಾರ ಸ್ವಾಮಿ ಎನ್ನುವವರು ಬರೆದಿದ್ದಾರೆ. ನಾನು ಯಾವುದೇ ಪತ್ರ ವ್ಯವಹಾರ ಮಾಡುವುದಾದರೂ ಜಿ ಕುಮಾರ ಸ್ವಾಮಿಯವರಿಂದ

ಮಾಡಿಸುತ್ತೇನೆ ಎಂದರೆ ಸರಿ.

ನಾನು ಜಿ. ಕುಮಾರ ಸ್ವಾಮಿಯವರಿಂದ ಎಷ್ಟು ಕರಾರು ಪತ್ರ ಅಥವಾ ಕ್ರಯ ಪತ್ರ ಮಾಡಿಸಿದ್ದೇನೆ ಎನ್ನುವುದು ನನಗೆ ಮರೆತುಹೋಗಿದೆ. ನಿಮ್ಮ ಹಾಗೂ ಪ್ರತಿವಾದಿಗಳ ನಡುವೆ ಆದ ಎಷ್ಟು ಪತ್ರ ವ್ಯವಹಾರವನ್ನು ಜಿ ಕಮಾರ ಸ್ವಾಮಿಯವರ ಮೂಲಕ ಮಾಡಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ತನಗೆ ನೆನಪಿಲ್ಲ, ಆದರೆ ತಾನು ಏನೇ ಪತ್ರ ವ್ಯವಹಾರವನ್ನು ಮಾಡಿಸಿದರೂ ಜಿ ಕುಮಾರ ಸ್ವಾಮಿಯವರ ಮೂಲಕವೇ ಮಾಡಿಸುತ್ತೇನೆ ಎಂದು ಉತ್ತರಿಸುತ್ತಾರೆ . ನಿಡಿ–1 ರಿಂದ 3 ರ ದಿಃ12.02.2013, 14.05.2013 ಹಾಗೂ 28.08.2013 ರ ಕರಾರು ಪತ್ರಗಳನ್ನು ಜಿ ಕುಮಾರಸ್ವಾಮಿಯವರೇ ತಯಾರಿಸಿದ್ದಾರೆ ಎಂದರೆ ಸರಿ. ನಿಪಿ.1 ನ್ನು ಬರೆದ ಜಿ.ಕುಮಾರ ಸ್ವಾಮಿಯವರೇ ನಿಡಿ–1 ರಿಂದ 3 ರ ದಾಖಲೆಗಳನ್ನು ತಯಾರಿಸಿದ್ದಾರೆ ಎಂದರೆ ಸರಿ.

ದಿಃ12.02.2003 ರಂದು ಮಾಡಿದ ನಿಡಿ–1 ರ ಕ್ರಯದ ಕರಾರು ಪತ್ರವನ್ನು ದಿಃ12.04.2013 ರಲ್ಲಿ ನಿಡಿ–4 ರ ಪ್ರಕಾರ ರದ್ದತಿ ಮಾಡಿಕೊಟ್ಟಿದ್ದೇನೆ ಎಂದರೆ ಸರಿ. ನಿಡಿ–4 ರ ದಾಖಲೆಯನ್ನೂ ಸಹ ಜಿ.ಕುಮಾರಸ್ವಾಮಿಯವರೇ ತಯಾರಿಸಿದ್ದಾರೆ ಎಂದರೆ ಸರಿ. ನೀವು ಈ ವರೆಗೆ ಎಷ್ಟು ಜನರಿಗೆ ಹಣವನ್ನು ಸಾಲವಾಗಿ ಕೊಟ್ಟಿದ್ದೀರಿ ಹಾಗೂ ಎಷ್ಟು ಜನರಿಂದ ಕ್ರಯದ ಕರಾರ ಪತ್ರವನ್ನು ಬರೆಸಿಕೊಂಡಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸಾಲ ಕೊಟ್ಟು ಕರಾರು ಪತ್ರ ಬರೆಸಿಕೊಂಡಿಲ್ಲ ಎಂದು ಉತ್ತರಿಸುತ್ತಾರೆ . ನಾನು ಸರ್ಕಾರದಿಂದ ಪರವಾನಿಗೆ ಪಡೆಯದೇ ಹಣದ ಲೇವಾದೇವಿ ವ್ಯವಹಾರ ಮಾಡುತ್ತಿದ್ದು ಅದರ ಭದ್ರತೆಗಾಗಿ ಜನರಿಂದ ಕರಾರು ಪತ್ರ ಬರೆಸಿಕೊಳ್ಳುತ್ತೇನೆ ಹಾಗೂ ಚೆಕ್ ಪಡೆದುಕೊಳ್ಳುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದಲ್ಲಿ ಹೇಳಿದಂತೆ ಪ್ರತಿವಾದಿಗಳು ನನಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿಲ್ಲ, ಸ್ವತ್ತನ್ನು ಮಾರಾಟ ಮಾಡುವ ಉದ್ದೇಶ ಪ್ರತಿವಾದಿಗಳಿಗೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು

ನನ್ನಿಂದ ಪಡೆದ ಹಣದ ಬಾಬ್ತು ಭದ್ರತೆಗಾಗಿ ನಾನು ಅವರಿಂದ ನಿಪಿ.1 ರ ಕರಾರು ಪತ್ರವನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನಿಂದ ಪಡೆದ ಹಣವನ್ನು ಬಡ್ಡಿ ಸಮೇತ ವಾಪಸ್ಸು ಕೊಟ್ಟು, ರದ್ದತಿ ಪತ್ರ ಬರೆದುಕೊಡಿ ಎಂದು ಹಲವಾರು ಸಾರಿ ಅವರು ನನ್ನನ್ನು ಕೇಳಿಕೊಂಡರೂ ಸಹ ಅವರ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ರದ್ದತಿ ಪತ್ರ ಬರೆದುಕೊಡದೇ ಈ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನಿಂದ ಪಡೆದ ಹಣವನ್ನು ಬಡ್ಡಿ ಸಮೇತ ಹಿಂತಿರುಗಿಸಿದ್ದರೂ ಸಹ ಆ ವಿಚಾರವನ್ನು ಮರೆಮಾಚಿ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.